ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕರ್ನಾಟಕ ರಾಜ್ಯದಲ್ಲಿರುವ ಬೌದ್ಧ ವಿಹಾರ (ದೇವಾಲಯ) ಗಳಿಗೆ ನವೀಕರಣ/ ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಸಹಾಯಾನುಧನ ಬಿಡುಗಡೆ ಮಾಡುವ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ: 1 2016-17ನೇ ಸಾಲಿನ ಆಯವ್ಯಯ ಭಾಷಣ,

2 ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರ ಏಕಕಡತ ಸಂಖ್ಯೆ: ಅಸಂನಿ/ ಆ.ಭಾಷಣ/ಸಿಆರ್-01/2016-17 ದಿನಾಂಕ:31-03-2016.

<>*<>

ಪ್ರಸ್ತಾವನೆ:-

2016-17ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ-216 ರಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿನ ಭೌದ್ಧ ಸಮುದಾಯದ ಭೌದ್ಧ ವಿಹಾರ (ದೇವಾಲಯ)ಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಒದಗಿಸಲಾಗುವುದೆಂದು ಘೋಷಿಸಲಾಗಿದೆ.

ಅದರಂತೆ, ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರು ಮೇಲೆ (2)ರಲ್ಲಿ ಓದಲಾದ ಏಕಕಡತದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಬೌದ್ಧ ಸಮುದಾಯದ ಭೌದ್ಧ ವಿಹಾರ (ದೇವಾಲಯ)ಗಳಿಗೆ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಸಹಾಯಾನುಧನ ಬಿಡುಗಡೆ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅದರಂತೆ, ಬೌದ್ಧ ಸಮುದಾಯದ ಭೌದ್ಧ ವಿಹಾರ (ದೇವಾಲಯ)ಗಳಿಗೂ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡಲು ಪ್ರತ್ಯೇಕ ಮಾರ್ಗಸೂಚಿಗಳನ್ನು ರಚಿಸುವುದು ಅಗತ್ಯವೆಂದು ಈ ಸಂಬಂಧ ಸಹಾಯಾನುದಾನ ಮಂಜೂರು ಮಾಡಲು ಮಾರ್ಗಸೂಚಿಗಳನ್ನು ರೂಪಿಸಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ.

**ಸರ್ಕಾರದ ಆದೇಶ ಸಂಖ್ಯೆ: MWD 140 MDS 2016, ಬೆಂಗಳೂರು, ದಿನಾಂಕ:24-09-2016**

ಕರ್ನಾಟಕ ರಾಜ್ಯದಲ್ಲಿನ ಬೌದ್ಧ ವಿಹಾರ (ದೇವಾಲಯ)ಗಳಿಗೆ ನವೀಕರಣ/ದುರಸ್ಥಿ/ ಜೀರ್ಣೋದ್ಧಾರಕ್ಕಾಗಿ ಸಹಾಯಾನುದಾನ ಮಂಜೂರು ಮಾಡುವ ಈ ಯೋಜನೆಯನ್ನು ಆದೇಶಕ್ಕೆ "ಅನುಬಂಧ-ಎ" ರಲ್ಲಿ ಲಗತ್ತಿಸಿರುವ ಮಾರ್ಗಸೂಚಿಗಳೊಂದಿಗೆ ಜಾರಿಗೆ ತರಲು ಮಂಜೂರಾತಿ ನೀಡಲಾಗಿದೆ.

ಈ ಮಾರ್ಗಸೂಚಿಗಳು ತಕ್ಷಣದಿಂದ ಜಾರಿಗೆ ಬರುತ್ತವೆ. ಈ ಯೋಜನೆಗೆ ತಗಲುವ ವೆಚ್ಚವನ್ನು 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:2225-03-277-2-82 "**ಜೈನ್ ಮತ್ತು ಬೌದ್ಧ ಸಮುದಾಯದ ಅಭಿವೃದ್ಧಿ**" ಅಡಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು, ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನ ಕೋರತಕ್ಕದ್ದಲ್ಲ.

.......2